- ಕೇಂದ್ರ ಪರಿಸರ ಇಲಾಖೆಯ ಅನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
- ಬಿಡ್ಡಿಂಗ್ ಪ್ರಕ್ರಿಯೆಯ ಮೊದಲ ಹಂತ (RFQ) ಮುಗಿದಿರುತ್ತದೆ. 23 ರಾಷ್ಟ್ರೀಯ ಮಟ್ಟದ ಬಿಡ್ದುದಾರರು ಪೂರ್ವ ಅರ್ಹತೆ ಪಡೆದಿರುತ್ತಾರೆ. ಸದರಿ 23 ಬಿಡ್ದುದಾರರ ಪೈಕಿ ಯಾರು ಕಡಿಮೆ ದರವನ್ನು ನಮೂದಿಸುತ್ತಾರೋ ಅವರಿಗೆ ಈ ಯೋಜನೆಯನ್ನು ಕೈಗೊಳ್ಳಲು ವಹಿಸಿ ಕೊಡಲಾಗುತ್ತದೆ.

ಉ) ಈ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು 136.44 ಕೋಟಿ ರೂ.ಗಳನ್ನು ನೀಡಿ 1516.19 ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲಾಗಿದೆ. ಯಾವ ಬಿಡ್ದುದಾರರು ಈ ಯೋಜನೆಯನ್ನು ವಹಿಸಿಕೊಳ್ಳುತ್ತಾರೋ ಅವರು ಸದರಿ ವೆಚ್ಚವನ್ನು ಕರ್ನಾಟಕ ಸರ್ಕಾರ / ವಿದ್ಯುತ್ ಸರಬರಾಜು ಕಂಪನಿಗೆ ಹಿಂದಿರುಗಿಸುತ್ತಾರೆ. ವಿದ್ಯುತ್ ಖರೀದಿ ಒಪ್ಪಂದವಾದ ನಂತರ 48 ತಿಂಗಳಲ್ಲಿ ಮೊದಲ ಯೂನಿಟ್ (1x660 ಮೆ.ವ್ಯಾ.) ಕಾರ್ಯಾರಂಭ ಮಾಡುವ ಯೋಜನೆಯಿರುತ್ತದೆ.

ನಿರಂತರ ಜ್ಯೋತಿ ಯೋಜನೆ

166 (259) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿರಂತರ ಜ್ಯೋತಿ ಯೋಜನೆಯನ್ನು ಎಂದು ಅನುಷ್ಠಾನಗೊಳಿಸಲಾಯಿತು; ಈ ಯೋಜನೆಯ ಪ್ರಯೋಜನಗಳನ್ನು ಯಾವ ಯಾವ ಜಿಲ್ಲೆಗಳ ಎಷ್ಟೆಷ್ಟು ಹಳ್ಳಿಗಳು ಪಡೆದುಕೊಳ್ಳುತ್ತಿವೆ; ಈ ಯೋಜನೆಯ ಉದ್ದೇಶಗಳೇನು;

ಆ) ಬೀದರ್ ಜಿಲ್ಲೆಗೆ ವಿಶೇಷವಾಗಿ ಬಸವ ಕಲ್ಯಾಣ ಮತ ಕ್ಷೇತ್ರಕ್ಕೆ ಈ ಯೋಜನೆಯನ್ನು ವಿಸ್ತರಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಈ ಯೋಜನೆಯನ್ನು ಮುಂಬರುವ ದಿನಗಳಲ್ಲಿ ಬೀದರ್ ಜಿಲ್ಲೆಗೂ ವಿಸ್ತರಿಸಲಾಗುವುದೇ;

ಈ) ಈ ಯೋಜನೆಗೆ ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) "ನಿರಂತರ ಜ್ಯೋತಿ" ಯೋಜನೆಯನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ಹೊರತುಪಡಿಸಿ, ಉಳಿದ ನಾಲ್ಕು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನವೆಂಬರ್ 2009ರಂದು ಪ್ರಾಯೋಗಿಕವಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಕಾರ್ಯವ್ಯಾಪ್ತಿಯಲ್ಲಿ ಮಾಲೂರು ತಾಲ್ಲೂಕಿನಲ್ಲಿ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಕಾರ್ಯವ್ಯಾಪ್ತಿಯಲ್ಲಿ ಬೈಲಹೊಂಗಲ, ಸವಣೂರು ಮತ್ತು ಶಿಗ್ಗಾಂವ ತಾಲ್ಲೂಕಿನಲ್ಲಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಾರ್ಯವ್ಯಾಪ್ತಿಯಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಕಾರ್ಯವ್ಯಾಪ್ತಿಯಲ್ಲಿ ಕುಷ್ಟಗಿ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಲಾಯಿತು.

ಈ ಯೋಜನೆಯಿಂದ ಪ್ರಯೋಜನ ಪಡೆಯುವ ಜಿಲ್ಲಾವಾರು ಹಳ್ಳಿಗಳ ಮಾಹಿತಿಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಈ ಯೋಜನೆಯ ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿವೆ:–

- ಈ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ 11 ಕೆ.ವಿ. ಪ್ರತ್ಯೇಕ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಿ, ಕೃಷಿ ಮತ್ತು ಕೃಷಿಯೇತರ ವಿದ್ಯುತ್ ಸ್ಥಾವರಗಳನ್ನು ವಿಭಜಿಸಿ, ಕೃಷಿಯೇತರ ಸ್ಥಾವರಗಳಿಗೆ 24 ಗಂಟೆಗಳ ನಿರಂತರ ವಿದ್ಯುತ್ ಸರಬರಾಜು ಮಾಡುವುದು ಮತ್ತು ಕೃಷಿ ಸ್ಥಾವರಗಳಿಗೆ ನಿಗದಿತ ಅವಧಿಯಲ್ಲಿಯೇ ವಿದ್ಯುತ್ ಸರಬರಾಜು ಮಾಡುವುದು
- ಕೃಷಿ ಸ್ಥಾವರಗಳಿಗೆ ಸರಬರಾಜು ಮಾಡುವ ವಿದ್ಯುತ್ ಪ್ರಮಾಣವನ್ನು ನಿಖರವಾಗಿ ಅಳತೆ ಮಾಡುವುದು.
- ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದು.
- ಫೀಡರ್‌ನ ಕೊನೆಯ ಭಾಗದಲ್ಲಿರುವ ವಿದ್ಯುತ್ ಸ್ಥಾವರಗಳಿಗೆ ಉತ್ತಮ ವೋಲ್ಟೇಜ್ ಒದಗಿಸುವುದು.
- ಪರಿವರ್ತಕಗಳ ವಿಫಲತೆಯನ್ನು ಕಡಿಮೆಗೊಳಿಸುವುದು.
- ತಾಂತ್ರಿಕ ನಷ್ಟವನ್ನು ಕಡಿಮೆಗೊಳಿಸುವುದು.
- ವಿದ್ಯುತ್ ಕಳ್ಳತನವನ್ನು ತಡೆಯುವುದು.

ಆ) ಹೌದು. ಬಸವ ಕಲ್ಯಾಣ ಮತ ಕ್ಷೇತ್ರಕ್ಕೆ ಈ ಯೋಜನೆಯನ್ನು ವಿಸ್ತರಿಸಲಾಗಿದೆ.

ಇ) ಈ ಯೋಜನೆಯನ್ನು ಮುಂಬರುವ ದಿನಗಳಲ್ಲಿ ಬೀದರ್ ಜಿಲ್ಲೆಯ ಉಳಿದ ಭಾಗಗಳಿಗೂ ಸಹ ವಿಸ್ತರಿಸಲಾಗುವುದು.

ಈ) "ನಿರಂತರ ಜ್ಯೋತಿ" ಯೋಜನೆಗೆ ಇಲ್ಲಿಯವರೆಗೆ ವೆಚ್ಚ ಮಾಡಿರುವ ಹಣದ ವಿವರವನ್ನು ಕಂಪನಿವಾರು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ.ಸಂ.	ವಿದ್ಯುತ್ ಸರಬರಾಜು ಕಂಪನಿ ಹೆಸರು	ವೆಚ್ಚ (ಕೋಟಿ ರೂ.ಗಳಲ್ಲಿ)
1	ಬೆಸ್ಕಾಂ	205.50
2	ಸೆಸ್ಕ್	24.61
3	ಹೆಸ್ಕಾಂ	20.29
4	ಜೆಸ್ಕಾಂ	11.805

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಅಟ್ಟೂರುರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 259ಕ್ಕೆ ಅನುಬಂಧ:

ನಿರಂತರ ಜ್ಯೋತಿ ಯೋಜನೆಯಡಿ ಪ್ರಯೋಜನ ಪಡೆಯಲಾಗುವ ಜಿಲ್ಲಾವಾರು ಹಳ್ಳಿಗಳ ಸಂಖ್ಯೆಗಳ ವಿವರಗಳು ಈ ಕೆಳಕಂಡಂತಿವೆ:–

ಕ್ರ.ಸಂ.	ವಿದ್ಯುತ್ ಸರಬರಾಜು ಕಂಪನಿ ಹೆಸರು	ಜಿಲ್ಲೆಯ ಹೆಸರು	ಹಳ್ಳಿಗಳ ಸಂಖ್ಯೆಗಳು
1	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	ಬೆಂಗಳೂರು ನಗರ	–
2		ಬೆಂಗಳೂರು ಗ್ರಾಮೀಣ	952
3		ರಾಮನಗರ	697
4		ಚಿತ್ರದುರ್ಗ	527
5		ದಾವಣಗೆರೆ	1,244
6		ಕೋಲಾರ	1,175
7		ಚಿಕ್ಕಬಳ್ಳಾಪುರ	1,391
8		ತುಮಕೂರು	2,968

ಕ್ರ.ಸಂ.	ವಿದ್ಯುತ್ ಸರಬರಾಜು ಕಂಪನಿ ಹೆಸರು	ಜಿಲ್ಲೆಯ ಹೆಸರು	ಹಳ್ಳಿಗಳ ಸಂಖ್ಯೆಗಳು
9	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ	ಮಂಡ್ಯ	1844
10		ಮೈಸೂರು	1863
11		ಚಾಮರಾಜನಗರ	757
12		ಕೊಡಗು	–
13		ಹಾಸನ	2334
14	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	ಧಾರವಾಡ	356
15		ಗದಗ	324
16		ಹಾವೇರಿ	541
17		ಬಿಜಾಪುರ	805
18		ಬಾಗಲಕೋಟೆ	474
19		ಬೆಳಗಾಂ	1034
20		ಉತ್ತರ ಕನ್ನಡ	–
21	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ	ಗುಲ್ಬರ್ಗಾ	411
22		ಯಾದಗೀರ್	113
23		ಬೀದರ್	240
24		ರಾಯಚೂರು	991
25		ಕೊಪ್ಪಳ	489
26		ಬಳ್ಳಾರಿ	621

ಕೆ.ವಿ. ಹಾಗೂ 110 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪನೆ

167 (588) ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ತಾಲ್ಲೂಕಿನ ಕೊಲಕುಂದಾ ಮತ್ತು ಮೊದಕಪಲ್ಲಿ ಗ್ರಾಮಗಳಲ್ಲಿ 33 ಕೆ.ವಿ. ಉಪ ಕೇಂದ್ರಗಳು ಸ್ಥಾಪನೆ ಮಾಡುವಲ್ಲಿ ತಡವಾಗುತ್ತಿರುವುದು